ಹೇಳಿರತಕ್ಕಂಥ ಅಬ್ಜಕ್ಷನ್ಸ್ ಹಾಕಬಹುದು. ಆದರೆ, ಅದಕ್ಕೆ ಪೂರ್ವಭಾವಿಯಾಗಿ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇವೆ. ಆ ಇಲಾಖೆಯ ಜೊತೆಯಲ್ಲಿ ಸಂಪರ್ಕ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ನಿಮ್ಮ ಅಭಿಪ್ರಾಯವನ್ನು ಅವರ ಗಮನಕ್ಕೆ ತರುತ್ತೇನೆ.

(ಖ) ಉಡುಪಿ ಜಿಲ್ಲೆಯ ವಾರಾಹಿ ಯೋಜನೆಯಲ್ಲಿ ನಡೆದಿರುವ ಅವ್ಯವಹಾರ.

ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ): ಮಾನ್ಯ ಅಧ್ಯಕ್ಷರೇ, ಉಡುಪಿ ಜಿಲ್ಲೆಯ ಪ್ರತಿಷ್ಠಿತ ನೀರಾವರಿ ಯೋಜನೆಗಳಲ್ಲಿ ವಾರಾಹಿ ಯೋಜನೆಯೂ ಒಂದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈ ವಿಚಾರ ಏನಿದೆ, ಇದರ ಬಗ್ಗೆ ಅವರು ಪ್ರಸ್ತಾಪ ಮಾಡಿದ ಮೇಲೆ, ನನಗೆ ಮಾತನಾಡಲು ಒಂದು ಅವಕಾಶ ಮಾಡಿಕೊಡಬೇಕು. ಈ ವಿಷಯಕ್ಕೆ ಸಂಬಂಧಿಸಿದಂತೆ ಭಾರಿ ನೀರಾವರಿ ಸಚಿವರನ್ನು ಕರೆಸಬೇಕಾಗುತ್ತದೆ. ಇದು ಬಹಳ ಪ್ರಮುಖವಾಗಿರತಕ್ಕ ವಿಚಾರ. ಅವರು ಪ್ರಸ್ತಾಪ ಮಾಡಲಿ. ಆದರೆ, ನನಗೆ ಇವತ್ತು ಅಥವಾ ನಾಳೆಯಲ್ಲಿ ಯಾವುದಾದರೊಂದು ಸಂದರ್ಭದಲ್ಲಿ ಐದು ನಿಮಿಷ ಅವಕಾಶ ಮಾಡಿಕೊಡಬೇಕು.

ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ: ದು 21 ವರ್ಷಗಳ ಹಿಂದೆ ಶಂಕುಸ್ಥಾಪನೆಗೊಂಡು, ಈತನಕ ಒಂದು ಎಕರೆ ಜಮೀನಿಗೂ ನೀರನ್ನು ಕೊಡಲಿಲ್ಲ. ಅದು ಇವತ್ತು ಭ್ರಷ್ಟಾಚಾರದ, ಅವ್ಯವಹಾರದ ಆಗರವಾಗಿದೆ. ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಬೃಹತ್ ನೀರಾವರಿ ಸಚಿವರು ಸದನದಲ್ಲಿ ಹಾಜರಿರಬೇಕೆಂದು ಈ ನನ್ನ ಬೇಡಿಕೆಯನ್ನು ಸಲ್ಲಿಸುತ್ತಿದ್ದೇನೆ.

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಎಲ್ಲಾ ಮಂತ್ರಿಗಳು ಇಲ್ಲಿ ಹಾಜರಿರಬೇಕೆಂದು ಹೇಳುವುದಕ್ಕಾಗುವುದಿಲ್ಲ. ಮೇಲ್ಮನೆಯಲ್ಲಿಯೂ ಅವರ ಇಲಾಖೆಗೆ ಸಂಬಂಧಪಟ್ಟ ವಿಷಯಗಳು ಇರುತ್ತವೆ, ಅರ್ಧ ಜನ ಅಲ್ಲಿರುತ್ತಾರೆ, ಉಳಿದ ಅರ್ಧ ಜನ ಇಲ್ಲಿರುತ್ತಾರೆ. ಜೊತೆಗೆ, ಅವರು ಆ ಮನೆಯ ಸಭಾನಾಯಕರು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಹಿಂದೆ ಯಾವ ಪ್ರೊಸೀಜರ್ ಇತ್ತೆಂದರೆ, ಶೂನ್ಯವೇಳೆಯಲ್ಲಿ ಪ್ರಶ್ನೆಯನ್ನು ಕೇಳುವುದಕ್ಕೆ ತಾವು ಅವಕಾಶ ಕೊಡುತ್ತಿರುವಂತೆಯೇ ಹಿಂದೆಯೂ ಕೊಡುತ್ತಿದ್ದರು. ಆದರೆ, ಮುಖ್ಯಸಚೇತಕರು ಸಂಬಂಧಪಟ್ಟ ಮಂತ್ರಿಗಳಿಗೆ ಪತ್ರವನ್ನು ಬರೆದು ಒಂದು ವಾರದೊಳಗೆ ಉತ್ತರವನ್ನು ಹೇಳಿಸುವಂತಹ ಪದ್ಧತಿ ಇತ್ತು. ಬಹುಶಃ ಅದನ್ನು ಮಾಡಿಸಿದರೆ ಒಳ್ಳೆಯದು. ಇದು ಹಿಂದೆ ಇದ್ದ ಪದ್ಧತಿ.

ಅಧ್ಯಕ್ಷರು: ಸರ್ಕಾರ ಉತ್ತರವನ್ನು ಕೊಡಲೇಬೇಕೆಂದು ರೂಲ್ಸ್‌ನಲ್ಲಿ ಎಲ್ಲಿಯೂ ಇಲ್ಲ. ಮಾನ್ಯ ಸದಸ್ಯರ ಅನುಕೂಲಕ್ಕಾಗಿ ಬಿ.ಎ.ಸಿ.ಯವರು ಕ್ರಯೇಟ್ ಮಾಡಿರುವುದು ಅಷ್ಟೆ. ಶೂನ್ಯ ವೇಳೆ ಎಂದು ಇಲ್ಲವೇ ಇಲ್ಲ.

ಶ್ರೀ ಕೆ.ಜಯಪ್ರಕಾಶ ಹೆಗಡೆ: ಸರ್ಕಾರದವರು ಉತ್ತರವನ್ನೇ ಹೇಳದೆ ಇದ್ದರೆ, ಸದಸ್ಯರು ಪ್ರಶ್ನೆಯನ್ನು ಕೇಳಿ ಏನು ಪ್ರಯೋಜನವಾಗುತ್ತದೆ?

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ಸಚಿವರು): ಸರ್ಕಾರ ಉತ್ತರ ಹೇಳಬೇಕಾದ ನಿಯಮಗಳು ಇವೆ. ಆ ನಿಯಮಗಳ ಅಡಿಯಲ್ಲಿ ಸದಸ್ಯರು ನೋಟೀಸ್ ಕಳುಹಿಸಿದರೆ ಸಾಕು.

(ಖೂ) ಆರೋಗ್ಯ ಮತ್ತು ಕುಟುಂಬ ಇಲಾಖೆಯ ಕಿರಿಯ ಸಹಾಯಕರ ವರ್ಗಾವಣೆ ಕುರಿತು.

ಶ್ರೀ ಜಿ.ರಾಜುಗೌಡ(ಹನ್ನೂರು): ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ. ಆರೋಗ್ಯ ಇಲಾಖೆಯಲ್ಲಿ ಕಿರಿಯ ಸಹಾಯಕರುಗಳಾದ ಬಸವಣ್ಣ ಮತ್ತು ಪರಶಿವಮೂರ್ತಿ ಎಂಬುವವರು ಸ್ಥಳೀಕರು. ಅವರುಗಳನ್ನು ಸಾರ್ವಜನಿಕರ ದೂರಿನ ಮೇಲೆ ಮೈಸೂರು ಜಿಲ್ಲೆಗೆ ವರ್ಗಾವಣೆಯಾಗಿತ್ತು. ಅವರಿಗೆ ವರ್ಗಾವಣೆಯಾದ ಮೇಲೆ ಅನಧಿಕೃತವಾಗಿ 11 ತಿಂಗಳು ಗೈರಾದರು. ಈ ರೀತಿ ಗೈರಾದ ನಂತರ, ಮತ್ತೆ ಅದೇ ಸ್ಥಳಕ್ಕೆ ಅವರನ್ನು ಹಾಕಿರತಕ್ಕಂಥಾದ್ದು ಬಹಳ ಕಷ್ಟವಾಗಿದೆ. ಪರಶಿವಮೂರ್ತಿ ಎಂಬುವರು ಅಟ್ರಾಸಿಟಿ ಕೇಸಿನಲ್ಲಿ 11 ತಿಂಗಳು ಕಾರಾಗೃಹದಲ್ಲಿದ್ದರು. ಅಂತಹವರನ್ನು ಏನೂ ವಿಚಾರಣೆ ಮಾಡದೇ, ಅವರ ಮೇಲೆ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಮತ್ತೆ ಅವರನ್ನು ಅದೇ ಸ್ಥಳಕ್ಕೆ ವರ್ಗಾವಣೆ ಮಾಡಿರುವುದು ಬಹಳ ಅನ್ಯಾಯವಾಗಿದೆ. ಅಕೃತ್ಯವಾಗಿದೆ. ಈ ರೀತಿಯ ಒಂದು ಕೆಟ್ಟ ಸಂಪ್ರದಾಯವನ್ನು ಬೆಳೆಸುತ್ತಿದ್ದಾರೆ, ದಯಮಾಡಿ, ಮತ್ತೆ ಅವರನ್ನು ಆ ಸ್ಥಳದಿಂದ ವರ್ಗ ಮಾಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

(ಎ) ಅಡಿಕೆ ಬೆಲೆ ಕುಸಿದಿರುವುದರಿಂದ ಅಡಿಕೆ ಬೆಳೆಗಾರರಿಗೆ ಉಂಟಾಗಿರುವ ತೊಂದರೆ.

ಶ್ರೀ ವಿಶ್ವೇಶ್ವರ ಹೆಗಡೆ(ಅಂಕೋಲ): ಮಾನ್ಯ ಅಧ್ಯಕ್ಷರೇ, ರೈತರು ಆತ್ಮಹತ್ಯೆ